## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂಃ 751/2021**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಅಣ್ಣಪ್ಪ | ದಿನಾಂಕ | ಃ 26/02/2024 |
| ತಂದೆಯ ಹೆಸರು | ಃ ರಂಗಯ್ಯ | ಸಿ ಡಬ್ಲ್ಯೂ | ಃ 04 |
| ವಯಸ್ಸು | ಃ 24 ವರ್ಷ | ಪಿ ಡಬ್ಲ್ಯೂ | ಃ 04 |
| ಉದ್ಯೋಗ | ಃ ಗಾರೆ ಕೆಲಸ | | |
| ವಿಳಾಸ | ಃ ಮರಡಿ ಗ್ರಾಮ | | |

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಚಾಸಾ 1 ನನ್ನ ಅಣ್ಣ , ಚಾಸಾ 2 ನನ್ನ ಚಿಕ್ಕಮ್ಮ. ಅರೋಪಿತರನ್ನು ನಾನು ನೋಡಿರುತ್ತೇನೆ. ಸುಮಾರು 3 ವರ್ಷಗಳ ಹಿಂದೆ ನಾನು ಗಾರೆ ಕೆಲಸಕ್ಕೆ 1 ನೇ ಆರೋಪಿ ಜೊತೆ ಹೋಗಿ ರಾತ್ರಿ 9.00 ಗಂಟೆಗೆ ಇಬ್ಬರೂ ವಾಪಸ್ ಮನೆಗೆ ಬಂದೆವು. ಆ ಸಮಯದಲ್ಲಿ ಮನೆಯ ಹತ್ತಿರ ಕೇಶವರವರ ಹೆಂಡತಿ ಸುನೀತಾ ರವರು ಚಾಸಾ 2 ರವರನ್ನು ಹೊಡೆಯುತ್ತಿದ್ದರು. ಚಾಸಾ 1 ರವರು ನಿಂತಿದ್ದರು . ಆರೋಪಿತರು ಚಾಸಾ 3 ರವರಿಗೆ ರಾಡ್ ನಿಂದ ತಲೆಗೆ ಹೊಡೆದರು, ಆಗ ನಾನು ಆಟೋದಲ್ಲಿ ಚಾಸಾ 1 ಮತ್ತು 3 ರವರನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆ. ಆಗ ನಾನು ಹಾಗೂ ಚಾಸಾ 1, 5 ಹಾಗೂ ನಾನು ಅರಕಲಗೂಡು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ಆರೋಪಿತರು ನನಗೆ, ಚಾಸಾ 1 ಮತ್ತು 5 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆ, ಕಬ್ಬಿಣದ ರಾಡು ಹಾಗೂ ಕಲ್ಲು ಸದರಿ ದಿನದಂದು ಆರೋಪಿತರು ಹಲ್ಲೆಗೆ ಬಳಸಿದ ವಸ್ತುಗಳಾಗಿರುತ್ತವೆ. ಸಾಕ್ಷಿಗೆ ನಿಪಿ 2 ಮಹಜರ್ ತೋರಿಸಲಾಗಿ ಅದರ ಮೇಲಿನ ಸಹಿ ಒಪ್ಪಿದ ಕಾರಣ ಸದರಿ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ನನ್ನ ಜೊತೆ ಬೇರೆ ಯಾರು ಸಹಿ ಮಾಡಿದರು ಎಂದು ಗೊತ್ತಿಲ್ಲ. ಸದರಿ ಮಹಜರ್ ಮಾಡಿದ ದಿನಾಂಕ ಹೇಳಲು ಬರುವುದಿಲ್ಲ , ಮದ್ಯಾಹ್ನ 3 ಗಂಟೆಯಿಂದ 4.30 ರವರೆಗೆ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)

**<u>ಪಾಟಿ ಸವಾಲು ಎಪಿಪಿಯವರಿಂದಃ</u>**

ದಿಃ **14.04.2021** ರಂದು ರಾತ್ರಿ ಸುಮಾರು **8.00** ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇರುವಾಗ ನಮ್ಮ ಪಕ್ಕದ ಮನೆಯ ಚಾಸಾ 2 ರವರ ಮನೆಯ ಹತ್ತಿರ ಅವರ ಎರಡನೇ ಮಗ ಕೇಶವ ಎಂದರೆ 1 ನೇ ಆರೋಪಿ ಹಾಗೂ ಆತನ ಹೆಂಡತಿ ಎಂದರೆ 4 ನೇ ಆರೋಪಿ ಹಾಗೂ 3 ನೇ ಆರೋಪಿ ಹಾಗೂ 2 ನೇ ಆರೋಪಿ ಬಂದು ಜಮೀನು ಮತ್ತು ಮನೆಯನ್ನು ಅವರ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ಚಾಸಾ 2 ರವರಿಗೆ ಸಹಿ ಹಾಕುವಂತೆ ಹೇಳಿ ಗಲಾಟೆ ಮಾಡಿ ಚಾಸಾ 2 ರವರಿಗೆ ಕೈಯಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ 1 ರವರು ಅಲ್ಲಿಗೆ ಬಂದರು ಹಾಗೂ ಚಾಸಾ 2 ರವರು ಅವರಿಗೆ ನಡೆದ ಘಟನೆಯನ್ನು ಹೇಳಿದಾಗ ಪೊಲೀಸ್ ಠಾಣೆಗೆ ದೂರು ಕೊಡಲೆಂದು ಚಾಸಾ 2 ರವರು ಹೋಗುತ್ತಿರುವಾಗ 3 ನೇ ಆರೋಪಿ ಹಾಗೂ 2 ನೇ ಆರೋಪಿ ಚಾಸಾ 2 ರವರನ್ನು ಹಿಡಿದುಕೊಂಡು ಅಪಮಾನವಾಗುವ ರೀತಿ ಎಳೆದಾಡಿ ಅವಾಚ್ಯ ಶಬ್ದದಲ್ಲಿ ಬೈದರು ಎಂದರೆ ಸರಿ. ನಂತರ ಕೇಶವ ಕೈಯಿಂದ ಚಾಸಾ 2 ರವರ ಎಡಭುಜಕ್ಕೆ , 2 ನೇ ಆರೋಪಿ ಕೈಯಿಂದ ಚಾಸಾ 2 ರವರ ಕುತ್ತಿಗೆ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಆಗ ಚಾಸಾ 1 ರವರು ಏಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಸದರಿಯವರು ಚಾಸಾ 1 ರವರನ್ನು ಏಕಾಏಕಿ ಹಿಡಿದು ಎಳೆದಾಡಿದರು ಹಾಗೂ 2 ನೇ ಆರೋಪಿ ಕೈಯಿಂದ ಚಾಸಾ 1 ರವ ರಎದೆಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ನಂತರ ಅರೋಪಿತರೆಲ್ಲರೂ ಚಾಸಾ 1 ರವರನ್ನು ಕೆಳಗೆ ಬೀಳಿಸಿ ಸಣ್ಣಯ್ಯನ ಮಗ ಕೇಶವ ದೊಣ್ಣೆಯಿಂದ ಚಾಸಾ 1 ರವರ ಎಡಗಾಲಿನ ಬೆರಳಿಗೆ ಹೊಡೆದು ನೋವುಂಟು ಮಾಡಿದ ಎಂದರೆ ಸರಿ. 1 ನೇ ಆರೋಪಿ ಚಾಸಾ 1 ರವರ ಎಡಗಾಲಿನ ಬೆರಳಿಗೆ ಕಲ್ಲು ಎತ್ತಿಹಾಕಿ ನೋವುಂಟು ಮಾಡಿದ ಎಂದರೆ ಸರಿ. ಆಗ ಅಲ್ಲಿಯೇ ಇದ್ದ ನನ್ನ ಹೆಂಡತಿ ಅಂದರೆ ಚಾಸಾ 3 ಜಗಳ ಬಿಡಿಸಲು ಹೋದಾಗ ಸಣ್ಣಯ್ನ ಮಗ ಕೇಶವ ಚಾಸಾ 3 ರವರಿಗೆ ಅಪಮಾನವಾಗುವ ರೀತಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ ಹಾಗೂ ಕಬ್ಬಿಣದ ರಾಡಿನಿಂದ ಸದರಿಯವರು ಚಾಸಾ 3 ರವರ ತಲೆಯ ಮಧ್ಯಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ ಎಂದರೆ ಸರಿ. ಆಗ ಸಣ್ಣಯ್ಯನ ಮಗ ಕೇಶವ ಹಾಗೂ ಆತನ ಹೆಂಡತಿ 2 ನೇ ಆರೋಪಿ ಚಾಸಾ 3 ರವರಿಗೆ ಬಿಡುವುದಿಲ್ಲ ,ಕೊಲೆ ಮಾಡುತ್ತಾರೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ಅಲ್ಲಿಯೇ ಇದ್ದ ನಾನು ಹಾಗೂ ಚಾಸಾ 5 ರವರು ಹೋಗಿ ಏಟಾಗಿದ್ದ ಚಾಸಾ 1 ರಿಂದ 3 ರವರನ್ನು

ಒಂದು ವಾಹನದಲ್ಲಿ ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿ. ಗಲಾಟೆಯ ಬಗ್ಗೆ ಪಂಚಾಯಿತಿ ಮಾಡಿಕೊಳ್ಳೋಣ ಎಂದು ಸುಮ್ಮನಿದ್ದೇವೆ ಆದರೆ ಆರೋಪಿತರು ಪಂಚಾಯಿತಿಗೆ ಬರದೇ ಇದ್ದ ಕಾರಣ ಚಾಸಾ 1 ರವರು ದಿನಾಂಕ 20.04.2021 ರಂದು ತಡವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ನಂತರ ದಿನಾಂಕ 20.04.2021 ರಂದು ಪೊಲೀಸರು ಕೃತ್ಯ ಸ್ಥಳಕ್ಕೆ ಬಂದು ಮದ್ಯಾಹ್ನ 3.00 ಗಂಟೆಯಿಂದ 3.45 ಗಂಟೆಯವರೆಗೆ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ಜರುಗಿಸಿದರು ಆಹಾಗ ಆ ಸಮಯದಲ್ಲಿ ನಾನು ಹಾಗೂ ಚಾಸಾ 1 ಮತ್ತು 6 ರವರು ಹಾಜರಿದ್ದು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮಹಜರ್ ನ ಕಾಲದಲ್ಲಿ ಎಂ.ಓ.1 ರಿಂದ 3 ವಸ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಜಿ ಡಿ ಎಂ ವಕೀಲರಿಂದ ಆರೋಪಿತರ ಪರವಾಗಿಃ</u>

ಚಾಸಾ 1 ನನ್ನ ಅಣ್ಣ ಹಾಗೂ ಚಾಸಾ 2 ನನ್ನ ಚಿಕ್ಕಮ್ಮ ಎಂದರೆ ಸರಿ. ಚಾಸಾ 2 ರವರ ಮಗ ಕೇಶವ ಎಂದರೆ 3 ನೇ ಆರೋಪಿ ಸಹ ನನಗೆ ಅಣ್ಣ ಆಗಬೇಕು. 3 ನೇ ಆರೋಪಿಯು ಪ್ರೀತಿಸಿ ಮದುವೆಯಾಗಿದ್ದರು ಎಂದರೆ ಸರಿ. ಆ ರೀತಿ 3 ನೇ ಆರೋಪಿ ಪ್ರೀತಿಸಿ ಮದುವೆಯಾಗಿದ್ದು ಚಾಸಾ 1 ಮತ್ತು 2 ರವರರಿಗೆ ಇಷ್ಟರವಿರಲಿಲ್ಲ ಎಂದರೆ ಸರಿ. ಚಾಸಾ 1 ರವರು ಪಿತ್ರಾರ್ಜಿತ ಸ್ವತ್ತನ್ನು 3 ನೇ ಅರೋಪಿಗೆ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಹಾಗೂ ಚಾಸಾ 1 ಮತ್ತು 2 ರವರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಚಾಸಾ 3 ನನ್ನ ಹೆಂಡತಿ. ಅದೇ ರೀತಿ ನಾನು ಚಾಸಾ 5 ರವರು ಸಹ ಚೆನ್ನಾಗಿದ್ದೇವೆ ಎಂದರೆ ಸರಿ. ನಾನು ಕೆಲಸಕ್ಕೆ ಹೋದ ಸಮಯದಲ್ಲಿ ಚಾಸಾ 1 ರವರ ಮನೆಯಲ್ಲಿ ಸುನೀತಾ ಎಂದರೆ 4 ನೇ ಆರೋಪಿ, ಜಯಮ್ಮ ಎಂದರೆ ಚಾಸಾ 2 ರವರು ಇಬ್ಬರೇ ಇದ್ದರು. ಗಲಾಟೆಯಾಗುತ್ತಿತ್ತು ಎಂದು ಹೇಳಲಾದ ಸಮಯದಲ್ಲಿ ನಾನು ನಮ್ಮ ಮನೆಯ ಒಳಗೆ ಹೋಗಿದ್ದೆ. ನಾನು ನಮ್ಮ ಮನೆಯ ಒಳಗೆ ಹೋದ ಕಾರಣ ಚಾಸಾ 1 ಮತ್ತು 2 ರವರ ಮನೆಯಲ್ಲಿ ಏನು ನಡೆಯುತ್ತಿತ್ತು ಎಂದು ನನಗೆ ತಿಳಿಯಲಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಆಸ್ಪತ್ರೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ನಾನು ಹಾಗೂ 3 ನೇ ಆರೋಪಿ ಗಾರೆ ಕೆಲಸಕ್ಕೆ ಹೊಗಿದ್ದೆವು ಎಂದು ನಾನು ಪೊಲೀಸರಿಗೆ ಹೇಳಿಕೆಕೊಡುವಾಗ ಹೇಳಿರಲಿಲ್ಲ. ನಾನು ಪೊಲಿಸೇರಿಗೆ ಕೊಟ್ಟ ಹೇಳಿಕೆಯಲ್ಲಿ ಆರೋಪಿತರು ನನಗೂ ಕೊಲೆ ಬೆದರಿಕೆ ಹಾಕಿರುತ್ತೇನೆ ಎಂದು ಹೇಳಿರುತ್ತೇನೆ. ನಿಪಿ 1 ದೂರನ್ನು

ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ 1 ರವರ ಮನೆಯಲ್ಲಿ ಯಾವುದೇ ಗಲಾಟೆ ನಡೆದಿರುವುದಿಲ್ಲ, ಆದರೆ ಚಾಸಾ 1 ರವರು ನನ್ನ ಜೊತೆ ಚೆನ್ನಾಗಿರುವ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನಾನು ಹಾಗೂ ಚಾಸಾ 1 ರವರು ಷರೀಖ್ ಆಗಿ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಎಂ.ಓ.1 ರಿಂದ 3 ರಾಡ್, ದೊಣ್ಣೆ ಹಾಗೂ ಕಲ್ಲನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಮಹಜರನ್ನು ಚಾಸಾ 8 ರವರು ಬರೆದಿರುತ್ತಾರೆ. ನಿಪಿ 2 ರಲ್ಲಿ ಬರೆದಿರುವ ಚೆಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ನಿಪಿ 2 ಮಹಜರ್ ನಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುವುದಿಲ್ಲ, ಪೊಲೀಸ್ ಠಾಣೆಯಲ್ಲಿ ಅದನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಎಂ ಓ 1 ರಿಂದ 3 ಮುದ್ದೆಮಾಲುಗಳಿಗೂ ಆರೋಪಿತರಿಗೆ ಯಾವುದೇ ಸಂಬಂದವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳುಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ಚಾಸಾ 1 ರವರ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು.